# ಕನ್ನಡಕ್ಕೆ 'ಕಲ್ಕಿ' ಆಗಮನ

ರಾಜ್ಯಕ್ಕೆ ಮತ್ತೊಂದು ಹೊಸ ವಾಹಿನಿ ಸೇರ್ಪಡೆಯಾಗಿದೆ. ಕನ್ನಡ ರಾಜ್ಯೋತ್ಸವಕ್ಕೆ ಮನರಂಜನಾ ವಾಹಿನಿ ಕಲ್ಕಿ ಕನ್ನಡ ಸೇರ್ಪಡೆಯಾಗಿದೆ. ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಹಾಗೂ ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಹೆಮ್ಮೆಯ ಕೊಡುಗೆ ಕಲ್ಕಿ ಕನ್ನಡ ಫುಲ್ ಮನರಂಜನಾ ವಾಹಿನಿ.

ಮಾಧ್ಯಮ ಎಂದ ತಕ್ಷಣ ಎಲ್ಲರೂ ಯೋಚಿಸೋದು ಹೊಸತನ...ಹೊಸ ಯೋಚನೆ ಹಾಗೂ ವಿಭಿನ್ನ ಮನರಂಜನೆ. ಇಂತಹ ಒಂದು ಮನರಂಜನೆ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ನೀಡುವುದು ಮುಖ್ಯ ಗುರಿಯಾಗಿದೆ ಎನ್ನುತ್ತಾರೆ ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಸಂಸ್ಥೆಯ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಪಿ.ಕೈಲಾಸಂರವರು. ಈಗಾಗಲೆ ಕರ್ನಾಟಕದಲ್ಲಿ ಸಾಕಷ್ಟು ಮನರಂಜನೆ ವಾಹಿನಿಗಳು ಇದ್ದು ದೊಡ್ಡ ಮಟ್ಟದ ಸ್ಪರ್ಧೆ ನೀಡುತ್ತಿವೆ. ಇಂತಹ ಒಂದು ಸ್ಪರ್ಧೆಗೆ ಸ್ಪರ್ಧಿಯಾಗಿ ಸಿದ್ಧವಾಗಿದೆ ಕಲ್ಕಿ ಕನ್ನಡ.



ಇಲ್ಲಿ ಹೊಸ ತಂತ್ರಜ್ಞಾನಗಳಿಂದ ಕೂಡಿದ ಉಪಕರಣಗಳು, ಕರ್ನಾಟಕದ ಕಿರುತೆರೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಚ್.ಡಿ ಕ್ವಾಲಿಟಿವುಳ್ಳ ಮನರಂಜನೆಯ ಕಾರ್ಯಕ್ರಮಗಳನ್ನು ಕಿರುತೆರೆಯ ಮೇಲೆ ತರುತ್ತಿದೆ. ಕಳೆದ 3-4 ತಿಂಗಳಿನಿಂದ ಸಂಪೂರ್ಣ ಸಿದ್ಧತೆಯೊಂದಿಗೆ ಅಂದರೆ ವೀಕ್ಷಕರ ನಾಡಿಮಿಡಿತವನ್ನು ಅರಿಯುವ ಸಲುವಾಗಿ ಎಲ್ಲಾ ಜಿಲ್ಲೆಗಳಲ್ಲಿ ಒಂದು ತಂಡವನ್ನು ರಚಿಸಿ ಜನರು ಇಷ್ಟಪಡುವ ಕಾರ್ಯಕ್ರಮಗಳನ್ನು ನೀಡುವ ಚಿಂತನೆ ಜತೆಗೆ ಸ್ಪರ್ಧಾತ್ಮಕ ವಾಹಿನಿಗಳಿಗಿಂತಲೂ ವಿಭಿನ್ನ ರೀತಿಯಲ್ಲಿ ನಮ್ಮ ಮನರಂಜನಾ ಕಾರ್ಯಕ್ರಮಗಳನ್ನು ಎಲ್ಲಾ ವರ್ಗದ ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ.

ಕುಟುಂಬ ಸಮೇತರಾಗಿ ನೋಡುವಂತಹ ಅದ್ದೂರಿತನದ ರಿಯಾಲಿಟಿ ಶೋಗಳು, ಮನಮಿಡಿಯುವ ಧಾರವಾಹಿಗಳು ನಿಮ್ಮ ಮನ ಮನೆಗೆ ಬರಲಿವೆ ಎಲ್ಲ ಕಾರ್ಯಕ್ರಮಗಳನ್ನು ನೋಡಿ ಕಲ್ಕಿ ಕನ್ನಡ ವಾಹಿನಿಯನ್ನು ಬೆಳೆಸಿ ಎನ್ನುತ್ತಾರೆ ವೈಟ್ ಹಾರ್ಸ್ ನೆಟ್‌ವರ್ಕ್ ಸಂಸ್ಥೆಯ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಪಿ.ಕೈಲಾಸಂರವರು.